**ಇಂದು ದಿನಾಂಕ 14.07.2025 ರಂದು ಪಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

**1.** ನನ್ನ ತಂದೆಗೆ ಮಾತ್ರ ಲೀಸ್ ಆಗಿರುವ ಬಗ್ಗೆ ನಿಪಿ-28 ನ್ನು ಕೊಟ್ಟಿದ್ದೇನೆ. ಅದೇ ರೀತಿ ರಾಜಣ್ಣನಿಗು ಸಹ ಲೀಸ್ ಆಗಿದೆ ಎಂದರೆ ಒಟ್ಟು ಕುಟುಂಬದ ಪರವಾಗಿ ಆಗಿದೆ ಎನ್ನುತ್ತಾರೆ. ನನ್ನ ತಂದೆ ಹಾಕಿರುವ ಅರ್ಜಿಯಲ್ಲಿ ಒಟ್ಟು ಕುಟುಂಬದ ಪರವಾಗಿ ಎಂದು ನಮೂದಿಲ್ಲ ಎಂದರೆ ಒಟ್ಟು ಕುಟುಂಬದ ಪರವಾಗಿ ಎನ್ನುತ್ತಾರೆ. ರಾಜಣ್ಣ ಮತ್ತು ಗಾಯತ್ರಿರವರಿಗೆ ಸರ್ಕಾರದಿಂದ ಗ್ರ್ಯಾಂಟ್ ಆಗಿರುವ ಕಾರಣ ನಿಪಿ-32 ಮತ್ತು 33 ನ್ನು ಹಾಜರು ಮಾಡಿದ್ದೇನೆ. ಸರ್ವೆ ನಂ.66/1 ನ್ನು ರಾಜಣ್ಣನವರು ಖರೀದಿಸಿದ್ದಾರೆ. ಈ ಮೂರು ಮನೆಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದೊಡ್ಡಅಕ್ಕಯ್ಯಮ್ಮನವರ ಹೆಸರಿನಲ್ಲಿ 1 ಎಕರೆ 7 1/2 ಗುಂಟೆ ಮತ್ತು ಜಯಮ್ಮನ ಹೆಸರಿನಲ್ಲಿ 1 ಎಕರೆ 7 1/2 ಗುಂಟೆ ಇತ್ತು ಎಂದರೆ ನಿಜ. ಆ ಜಮೀನನ್ನು ಅವರು ಪ್ರತ್ಯೇಕವಾಗಿ ಮಾರಾಟ ಮಾಡಿದ್ದಾರೆ ಎಂದರೆ ನಿಜ. ಅದಾದನಂತರ ಅವರು ಸುಮಾರು ಜಮೀನುಗಳನ್ನು ಮತ್ತು ಸೈಟ್‌ಗಳನ್ನು ಖರೀದಿಸಿದ್ದಾರೆ ಎಂದರೆ ನಿಜ. ಆ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಆ ಆಸ್ತಿಗಳು ನಮ್ಮ ಅತ್ತೆಯ ಸ್ವಯಾರ್ಜಿತ ಆಸ್ತಿಗಳು ಎನ್ನುತ್ತಾರೆ. ರಾಜಣ್ಣ ಮತ್ತು ಗಾಯತ್ರಿರವರ ಸ್ವಯಾರ್ಜಿತ ಆಸ್ತಿಗಳನ್ನು ಸೇರಿಸಿ ಭಾಗ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**